[Govt. of Karnataka C.R.P. 67]

| |
|---|
| Deposition Sheets (RP.No.57) Form No.4 |

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 536/2024**

ಪಿ.ಡಬ್ಲ್ಯು : 11 ಸಿ.ಡಬ್ಲ್ಯು : 13

ಸಾಕ್ಷಿದಾರನ ಹೆಸರು : ಹರೀಶ್

ತಂದೆಯ ಹೆಸರು : ಸದಾನಂದ ಮೇರಾ

ಪ್ರಾಯ : 37 ವರ್ಷ

ಉದ್ಯೋಗ : ಚಾಲಕ

ವಾಸ : ಮುಡಾರು, ಕಾರ್ಕಳ

ದಿನಾಂಕ 24-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರು:-

ಚಾಸಾ-5 ರವರ ಪರಿಚಯ ಇರುವುದಿಲ್ಲ.

ಸುಮಾರು 2 ವರ್ಷಗಳ ಹಿಂದೆ ನಾನು ನನ್ನ ಗೂಡ್ಸ್ ವಾಹನವನ್ನಲು ಚಲಾಯಿಸಿಕೊಂಡು ಮಾಳ ಮಾರ್ಗವಾಗಿ ಹೋಗುತ್ತಿರುವಾಗ ಪೋಲಿಸರು ನನ್ನನ್ನು ತಡೆದು ನಿಲ್ಲಿಸಿ ಸ್ಥಳ ಮಹಜರಿಗೆ ಸಾಕ್ಷಿಯಾಗಿ ಬರಬೇಕೆಂದು ಹೇಳಿರುತ್ತಾರೆ. ಮಹಜರು ಸಮಯದಲ್ಲಿ ಸರ್ಕಾರಿ ಬಸ್ಸು ಅಪಘಾತವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಅದರಂತೆ ಪೋಲಿಸರು ಮಾಳದಲ್ಲಿ ನನ್ನ ಸಮಕ್ಷಮ ಮಹಜರು ಮಾಡಿ, ನಕ್ಷೆ ತಯಾರಿಸಿ, ಭಾವಚಿತ್ರ ತೆಗೆದು, ಸ್ಥಳ ಮಹಜರು ಮಾಡಿದ್ದು, ಮಹಜರಿಗೆ ನನ್ನ ಸಹಿ ಪಡೆದಿರುತ್ತಾರೆ. ಮಹಜರು ಸಮಯದಲ್ಲಿ ಬೇರೆ ಯಾರು ಹಾಜರಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ವಾಹನವನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ.

ಸಾಕ್ಷಿಯು ಸ್ಥಳ ಮಹಜರ್ ಹಾಗೂ ನಕಾಶೆಯಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಸ್ಥಳ ಮಹಜರನ್ನು ಈಗಾಗಲೇ ನಿಪಿ-6 ಎಂದು, ನಕಾಶೆಯನ್ನು ನಿಪಿ-7 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ-6(ಬಿ), ನಿಪಿ-7(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಹಜರು ವೇಳೆ ತೆಗೆದ ನಿಪಿ-8 ಭಾವಚಿತ್ರ ನೋಡಿ

ಗುರುತಿಸಿರುತ್ತಾರೆ. ಸಾಕ್ಷಿಯು ಅಪಘಾತಕ್ಕೆ ಸಂಬಂಧಿಸಿದ ನಿಪಿ-2 ರಿಂದ ನಿಪಿ-5 ಬಸ್ಸು ಭಾವಚಿತ್ರವನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರುಃ-

ದಿಃ 21-12-2023 ರಂದು ಪೋಲಿಸರು ಚಾಸಾ-5 ರವರು ತೋರಿಸಿಕೊಟ್ಟಂತೆ ಕಾರ್ಕಳ ತಾಲೂಕು, ಮಾಳ ಗ್ರಾಮದ, ಶೃಂಗೇರಿ-ಬಜಗೋಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ನನ್ನ ಹಾಗೂ ಚಾಸಾ-12 ರವರ ಸಮಕ್ಷಮ ಸ್ಥಳ ಮಹಜರನ್ನು ಬೆಳ್ಳಿಗ್ಗೆ 10.00 ಗಂಟೆಯಿಂದ 10.45 ಗಂಟೆಯವರೆಗೆ ತಯಾರಿಸಿ, ಅಪಘಾತಕ್ಕೆ ಸಂಬಂಧಿಸಿದ ನಿಪಿ-2 ರಲ್ಲಿ ಕಾಣುವ ಕೆ.ಎಸ್.ಆರ್.ಟಿ.ಸಿ ಬಸ್ಸನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು : ಆರೋಪಿ ಪರ : ಶ್ರೀ. ಎಮ್.ಐ. ವಕೀಲರಿಂದ ಃ

ಸ್ಥಳ ಮಹಜರಿಗೆ ಬರುವಂತೆ ಪೋಲಿಸರು ನೋಟೀಸು ನೀಡಿರುವುದಿಲ್ಲ. ನಾನು ಬೆಳ್ಳಿಗ್ಗೆ 11.00 ಗಂಟೆಗೆ ಮಾಳದಲ್ಲಿದ್ದು, 5 ನಿಮಿಷ ಸ್ಥಳದಲ್ಲಿದ್ದೆ. ಪೋಲಿಸರು ಈಗಾಗಲೇ ತಯಾರಿಸಿದ ದಾಖಲೆಗಳಿಗೆ ನನ್ನ ಸಹಿ ಪಡೆದಿರುತ್ತಾರೆ. ನನ್ನ ಸಮಕ್ಷಮ ಯಾವುದೇ ದಾಖಲೆಯ ಬರಳಚ್ಚು ಮಾಡಿರುವುದಿಲ್ಲ. ನಾನು ತಕ್ಷೀರು ಸ್ಥಳಕ್ಕೆ ಹೋಗಿರುವುದಿಲ್ಲ ಹಾಗೂ ಮಹಜರಿಗೆ ಠಾಣೆಯಲ್ಲಿ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ